ಕರ್ನಾಟಕ ವಿಶ್ವವಿದ್ಯಾಲಯ,ಧಾರವಾಡ
KARNATAK UNIVERSITY, DHARWAD
*NAAC Accredited with "A" Grade 2022"*
"UNIVERSITY WITH POTENTIAL FOR EXCELLENCE"
ಖರೀದಿ ಮತ್ತು ಸಂಗ್ರಹ ವಿಭಾಗ
ಪಾವಟೆ ನಗರ, ಧಾರವಾಡ – 580003
e-mail: store.purchase@kud.ac.in

No.KU/S&P/2023-24/ Date:

# ಪ್ರಕಟಣೆ

**ಇ–ಪ್ರಾಕ್ಯೂರಮೆಂಟ್ ಮೂಲಕ ಟೆಂಡರ್/ಹರಾಜು ಕರೆಯುವ ಕುರಿತು.**

ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಸಂಗ್ರಹವಾಗಿರುವ ನಿರುಪಯುಕ್ತ ಪೇಪರುಗಳ (ರದ್ದಿ) ವಿಲೇವಾರಿಗಾಗಿ ಇ–ಪ್ರಾಕ್ಯೂರಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ.

| ಅ.ನಂ. | ಅರ್ಜಿ ಸಲ್ಲಿಸುವ ವಿವರ | ಸಮಯ ಮತ್ತು ದಿನಾಂಕ |
|---|---|---|
| 1. | ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | 06/02/2024 |
| 2. | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | 21/02/2024 @ 17:00:00 |
| 3. | ತಾಂತ್ರಿಕ ಬಿಡ್ ಕರೆಯುವ ದಿನಾಂಕ | 22/02/2024 @ 17:05:00 |
| 4. | ಫೈನಾನ್ಸಿಯಲ್ ಬಿಡ್ ಕರೆಯುವ ದಿನಾಂಕ | 24/02/2024 @ 17:00:00 |

ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲ https://kppp.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು.

ಕುಲಸಚಿವರು

# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
## ಖರೀದಿ ಮತ್ತು ಸಂಗ್ರಹ ವಿಭಾಗ

## ವಿವಿಧ ನಮೂನೆಯ ರದ್ದಿಯ ವಿವರ

| ಅ.ನಂ. | ರದ್ದಿಯ ವಿವರ | ಕ.ವಿ.ವಿ. ನಿಗದಿಪಡಿಸಿದ ದರ ಪ್ರತಿ ಕೆ.ಜಿ.ಗೆ ರೂ. ಪೈಸೆ. | ಟೆಂಡರ್‌ದಾರರು ಸಲ್ಲಿಸಬೇಕಾದ ದರ ಪ್ರತಿ ಕೆ.ಜಿ.ಗೆ ರೂ. ಪೈಸೆ. |
|---|---|---|---|
| 1 | ಹಳೆ ಉತ್ತರ ಪತ್ರಿಕೆ | 36.00 | |
| 2 | ರೆಕಾರ್ಡ ಫೈಲ್ಸ್ & ಸಿಂಡಿಕೇಟ್ ಅಜೆಂಡಾ | 25.00 | |
| 3 | ವೃತ್ತ ಪತ್ರಿಕೆ | 27.00 | |
| 4 | ಹಳೆ ಪ್ರಶ್ನೆಪತ್ರಿಕೆ/ಪ್ರೊಸಪೆಕ್ಟಸ್/ಸಿಲೆಬಸ್ ಬುಕ್ಸ್/ಬುಕ್ಸ್ | 26.00 | |
| 5 | ಎಣ್ಣೆ ಕಾಗದ & ಕಟ್ ಪೀಸ್ | 30.00 | |
| 6 | ಖಾಕಿ ಕವರ/ಸ್ಕ್ರಿಪಿಂಗ್ | 20.00 | |

** ಹಣಕಾಸು ಬಿಡ್ ವಿವರಗಳನ್ನು ಯಾವುದೇ ಕಾರಣಕ್ಕೂ ತಾಂತ್ರಿಕ ಬಿಡ್‌ನಲ್ಲಿ ನಮೂದಿಸತಕ್ಕದ್ದಲ್ಲ.

ಕುಲಸಚಿವರು

# ಕರಾರುಗಳು

1) ಈ ಕೆಳಗೆ ಕಾಣಿಸಿರುವ ಒಟ್ಟು 22 ಕರಾರುಗಳನ್ನು ಸೂಚಿಸಿ ಟೆಂಡರ ಕರೆಯುವದು.

1. ರೂ. 5,00,000/- (ಐದು ಲಕ್ಷ) ಗಳ ಇ.ಎಮ್.ಡಿ ಹಣವನ್ನು ಇ-ಪ್ರೊಕ್ಯುರಮೆಂಟ್ ಮೂಲಕ ಪಾವತಿಸತಕ್ಕದ್ದು. ಇಲ್ಲವಾದಲ್ಲಿ ಟೆಂಡರ್/ಹರಾಜು ಅರ್ಜಿಯನ್ನು ರದ್ದು ಪಡಿಸಲಾಗುವುದು, ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.
2. ಜಿ.ಎಸ್.ಟಿ ಕಾಯ್ದೆಯಡಿ ನೊಂದಣಿ ಹೊಂದಿರಬೇಕು.
3. ಹಿಂದಿನ ಮೂರು ತಿಂಗಳು/ತ್ರೈಮಾಸಿಕದ ಜಿ.ಎಸ್.ಟಿ. ನಮೂನೆಯನ್ನು ಲಗತ್ತಿಸಬೇಕು.
4. ಆದಾಯ ತೆರಿಗೆಯಡಿ "ಪ್ಯಾನ್" ಹೊಂದಿರಬೇಕು. ಹಿಂದಿನ ಆದಾಯ ವರ್ಷದ ರಿಟರ್ನ ಪ್ರತಿಯನ್ನು ಲಗತ್ತಿಸಬೇಕು.
5. ಅತಿ ಹೆಚ್ಚು ದರಗಳನ್ನು ಸೂಚಿಸಿದ ಫರ್ಮನವರಿಗೆ ಟೆಂಡರನ್ನು ಮಂಜೂರು ಮಾಡಲಾಗುವುದು.
6. ವಿವಿಧ ರದ್ದಿ ನಮೂನೆಗಳಂತೆ ದರಗಳನ್ನು ಬೇರೆ ಬೇರೆಯಾಗಿ ಸೂಚಿಸಬೇಕು.
7. ಪ್ರತಿ ಕೆ.ಜಿ. ಗೆ ದರಗಳನ್ನು ಜಿ.ಎಸ್.ಟಿ ಬಿಟ್ಟು ಸೂಚಿಸಬೇಕು. ವಿಲೇವಾರಿ ಮೊತ್ತಕ್ಕೆ ಜಿ.ಎಸ್.ಟಿ ಹಣವನ್ನು ಬಿಡ್ಡಾದಾರರೇ ಪಾವತಿಸಕ್ಕದ್ದು.
8. ಟೆಂಡರ ಮಂಜೂರಾದ ನಂತರ ರೂ. 100/- ಚಾಪಾ ಕಾಗದದಲ್ಲಿ ಒಪ್ಪಿಗೆ ಪತ್ರ ಬರೆದು ಕೊಡಬೇಕು.
9. ಟೆಂಡರ/ಹರಾಜನ ಅವಧಿಯು ಒಂದು ವರ್ಷದ ಅವಧಿಯಲ್ಲಿ ಸಂಗ್ರಹವಾಗುವ ರದ್ದಿ ವಿಲೇವಾರಿಗೆ ಅರ್ಹವಾಗಿರುತ್ತದೆ. ರದ್ದಿ ವಿಲೇವಾರಿಗೆ ಆದೇಶ ನೀಡಿದ ಒಂದು ತಿಂಗಳೊಳಗಾಗಿ ಸಂಪೂರ್ಣ ರದ್ದಿಯನ್ನು ವಿಲೇವಾರಿಗೊಳಿಸುವ ಶರತ್ತಿಗೆ ಒಳಪಟ್ಟಿರುತ್ತದೆ.
10. ಟೆಂಡರ/ಹರಾಜು ಫಾರ್ಮನಲ್ಲಿ ನಮೂದಿಸಿದ ದರಗಳನ್ನು ತಿದ್ದುಪಡೆ ಮಾಡಲಾಗುವುದಿಲ್ಲ.
11. ಸ್ವಂತ ಖರ್ಚಿನಲ್ಲಿಯೇ ರದ್ದಿಯನ್ನು ಚೀಲಗಳಲ್ಲಿ ತುಂಬಿಸಿ ವಾಹನದಲ್ಲಿ ವಿಲೇವಾರಿ ಮಾಡಬೇಕು.
12. ಟೆಂಡರ/ಹರಾಜು ಮಂಜೂರಾಗದ ಟೆಂಡರುದಾರರ ಇ.ಎಮ್.ಡಿ. ಹಣವನ್ನು ನಿಯಮಾನುಸಾರ ಹಿಂದಿರುಗಿಸಲಾಗುವುದು.

13. ರದ್ದಿ ಪೇಪರುಗಳ ವಿಲೇವಾರಿ ವೇ ಬ್ರಿಜ್‌ನಲ್ಲಿ ತೂಕ ಮಾಡಿಸಲಾಗುವುದು. ರದ್ದಿ ಮೇಲ್ವಿಚಾರಣಾ ಸಮಿತಿ ಸಭೆಯ ನಿರ್ಣಯ ಅಂತಿಮವಾಗಿರುತ್ತದೆ ಹಾಗೂ ತೂಕದ ವೆಚ್ಚವನ್ನು ಟೆಂಡರ/ಹರಾಜುದಾರರೇ ಭರಿಸಬೇಕಾಗುತ್ತದೆ.
14. ಪ್ರತಿ ಸಲ ರದ್ದಿಯನ್ನು ಸಾಗಿಸುವ ಮೊದಲು ಪ್ರತಿ ಲಾರಿಯಲ್ಲಿ ತುಂಬುವ ರದ್ದಿಯ ಮೌಲ್ಯದ ಶೇ.75% ಮೊತ್ತವನ್ನು ಮುಂಗಡವಾಗಿ ವಿಶ್ವವಿದ್ಯಾಲಯಕ್ಕೆ ಡಿ.ಡಿ. ಮೂಲಕ ಹಣಕಾಸು ಅಧಿಕಾರಿಗಳು, ಕವಿವಿ, ಧಾರವಾಡ ಇವರ ಹೆಸರಿನಲ್ಲಿ ಸಲ್ಲಿಸಬೇಕು. ಉಳಿದ 25% ಮೊತ್ತವನ್ನು ಮರುದಿವಸವೇ ತುಂಬ ಬೇಕಾಗಿರುತ್ತದೆ.
15. ರದ್ದಿ ವಿಲೇವಾರಿ ಕುರಿತು ಯಾವುದೇ ಸಮಸ್ಯೆ ಬಂದಲ್ಲಿ ಮಾನ್ಯ ಕುಲಪತಿಗಳ ನಿರ್ಣಯ ಅಂತಿಮವಾಗಿರುತ್ತದೆ.
16. ಕಡ್ಡಾಯವಾಗಿ ಮುಂಗಡ ಹಣ ಡಿ.ಡಿ. ರೂಪದಲ್ಲಿ ಹಣಕಾಸು ಅಧಿಕಾರಿಗಳು, ಕವಿವಿ, ಧಾರವಾಡ ಇವರ ಹೆಸರಿನಲ್ಲಿ ಪಾವತಿಸಿ ರದ್ದಿ ವಿಲೇವಾರಿ ಮಾಡಬೇಕು.
17. ರದ್ದಿ ಟೆಂಡರ ಕುರಿತು ಯಾವುದೇ ತಕರಾರುಗಳು ಬಂದಲ್ಲಿ ಧಾರವಾಡ ನ್ಯಾಯಲಯದಲ್ಲಿ ಬಗೆಹರಿಸಿಕೊಳ್ಳಬೇಕು.
18. ಟೆಂಡರ ಮಂಜೂರಾದ ನಂತರ ವಿವಿಧ ಕಾರಣಗಳನ್ನು ನೀಡಿ ರದ್ದಿ ವಿಲೇವಾರಿ ಮಾಡದೆ ಇದ್ದ ಪಕ್ಷದಲ್ಲಿ ಇ.ಎಮ್.ಡಿ. ಹಣ ರೂ. 5,00,000/- ಗಳನ್ನು ಕ.ವಿ.ವಿ.ಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
19. ಎಲ್ಲ ತೆರಿಗೆಗಳನ್ನು ಮಂಜೂರಾದ ಟೆಂಡರುದಾರರೇ ಭರಿಸಬೇಕು.
20. ಕರ್ನಾಟಕ ವಿಶ್ವವಿದ್ಯಾಲಯದಿಂದ ವಿಧಿಸುವ ಶರತ್ತುಗಳನ್ನು ಒಪ್ಪಿಗೆ ಪತ್ರದಲ್ಲಿ ನೋಟರಿ ಮಾಡಿಸಿ ಸಲ್ಲಿಸುವುದು.
21. ಹಳೆ ಉತ್ತರ ಪತ್ರಿಕೆಗಳನ್ನು ಕಡ್ಡಾಯವಾಗಿ ಕರ್ನಾಟಕ ರಾಜ್ಯದಿಂದ ಇತರೆ ರಾಜ್ಯಗಳಿಗೆ ಕಳುಹಿಸುವ ವ್ಯವಸ್ಥೆ ಮಾಡಬೇಕು.

**ಕುಲಸಚಿವರು**

# <u>ಒಪ್ಪಿಗೆ ಪತ್ರ.</u>

ಕರ್ನಾಟಕ ವಿಶ್ವವಿದ್ಯಾಲಯದ ರದ್ದಿಯ ಮಾರಾಟ ಟೆಂಡರ ಕುರಿತು ಟೆಂಡರನಲ್ಲಿ ಭಾಗವಹಿಸಿರುವ ಅರ್ಜಿದಾರನಾದ ನಾನು (ಮಾಲೀಕರ ಹೆಸರು)____________________ (ಫರ್ಮ ಹೆಸರು)---------------------------- ತಮಗೆ ಬರೆದು ಕೊಡುವ ಒಪ್ಪಿಗೆ ಪತ್ರ ಈ ಕೆಳಗಿನಂತೆ ಇರುತ್ತದೆ.

1. ಟೆಂಡರನಲ್ಲಿ ಸಲ್ಲಿಸಿರುವ ದರಗಳು ಒಂದು ವರ್ಷದ ಅವಧಿಗೆ ಮಾತ್ರ ಸೀಮಿತವಾಗಿರುತ್ತವೆ.
2. ಸರ್ಕಾರಕ್ಕೆ ಸಂಬಂಧಿಸಿದ ಎಲ್ಲ ತೆರಿಗೆ ಹಾಗೂ ಇತರೆ ವಿಲೇವಾರಿ ವೆಚ್ಚವನ್ನು ನಾವೇ ಭರಿಸುತ್ತೇವೆ.
3. ರದ್ದಿ ವಿಲೇವಾರಿ ವಿಷಯವಾಗಿ ಯಾವುದೇ ತಕರಾರುಗಳು ಬಂದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವೇ ಅಂತಿಮವಾಗಿದ್ದು ಅದು ಬಗೆಹರಿಯದಿದ್ದಲ್ಲಿ ಮಾತ್ರ ಧಾರವಾಡ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಲು ಬದ್ಧನಾಗಿರುತ್ತೇನೆ.
4. ನಾನು ರದ್ದಿ ವಿಲೇವಾರಿ ಕಾರ್ಯದಲ್ಲಿ ವಿಫಲನಾದಲ್ಲಿ ನನ್ನ ಇ.ಎಮ್.ಡಿ. ಹಣ ರೂ. 5,00,000/- ಗಳನ್ನು ಕ.ವಿ.ವಿ.ಗೆ ಮುಟ್ಟುಗೋಲು ಹಾಕಿಕೊಳ್ಳಲು ಒಪ್ಪಿಗೆಕೊಂಡಿರುತ್ತೇನೆ.
5. ರದ್ದಿ ತೂಕವನ್ನು ರದ್ದಿ ಮೇಲ್ವಿಚಾರಣಾ ಸಮಿತಿ ಸಭೆಯ ನಿರ್ಣಯದಂತೆ ವೇ ಬ್ರಿಜ್‌ನಲ್ಲಿ ತೂಕ ಮಾಡಿಸಲು ಒಪ್ಪಿಕೊಂಡಿರುತ್ತೇನೆ.
6. ಪ್ರತಿ ಸಲ ರದ್ದಿಯನ್ನು ಸಾಗಿಸುವ ಮೊದಲು ಪ್ರತಿ ಲಾರಿಯಲ್ಲಿ ತುಂಬುವ ರದ್ದಿಯ ಮೌಲ್ಯದ ಶೇ.75% ಮೊತ್ತವನ್ನು ಮುಂಗಡವಾಗಿ ವಿಶ್ವವಿದ್ಯಾಲಯಕ್ಕೆ ಡಿ.ಡಿ. ಮೂಲಕ ಭರಿಸಿ, ಉಳಿದ ಉಳಿದ 25% ಮೊತ್ತವನ್ನು ಮರುದಿವಸವೇ ಭರಿಸುತ್ತೇನೆ.